**ಸಾಕ್ಷಿಯನ್ನು ದಿಃ *<u>06/06/2024</u>* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು ಃ ವಾದಿ ಪರ ವಕೀಲರಿಂದ.***

ವಾದ ಪತ್ರದಲ್ಲಿ ವಾದಿಯರು ಮಂಡಿಸಿದ ವಂಶಾವಳಿ ಸಾಕ್ಷಿದಾರರಿಗೆ ತೋರಿಸಲಾಗಿ ವಂಶಾವಳಿಯಲ್ಲಿರುವ ಸಂಬಂಧಗಳನ್ನು ಸೂಚಿಸಲಾಗಿ, ಸದರಿ ವಂಶಾವಳಿ ಸರಿ ಇರುತ್ತದೆ ಎಂದು ಸಾಕ್ಷಿದಾರರು ಒಪ್ಪಿರುತ್ತಾರೆ. ನಿ.ಪಿ.5 ರಂತೆ ಇರುವ ಉಳಿತಾಯ ಖಾತೆಯು ವಾದಿಯಾದ ತನ್ನ ಅತ್ತೆ ಸಾಕ್ಷಿದಾರರ ಹೆಸರಿನಲ್ಲಿ ಜಂಟಿ ಖಾತೆಯಲ್ಲಿರುತ್ತದೆ ಎಂದರೆ ನಿಜ. ನಿ.ಪಿ.6 ರಂತೆ ಇರುವ ಉಳಿತಾಯ ಖಾತೆಯು ವಾದಿಯಾದ ತನ್ನ ಅತ್ತೆ ಸಾಕ್ಷಿದಾರರ ಹೆಸರಿನಲ್ಲಿ ಜಂಟಿ ಖಾತೆಯಲ್ಲಿರುತ್ತದೆ ಎಂದರೆ ನಿಜ. ಸಾಕ್ಷಿದಾರರಿಗೆ ಕುಟುಂಬ ಸದಸ್ಯರ ನಡುವೆ ಕರಾರುಪತ್ರ ಎನ್ನುವ ದಾಖಲಾತಿ ತೋರಿಸಲಾಗಿ ಅದರಲ್ಲಿರುವ ನಾಲ್ಕು ಪೋಟೋಗಳಲ್ಲಿರುವ ವ್ಯಕ್ತಿಗಳನ್ನು ಗುರುತಿಸಿದ್ದು ಆದರೆ ಹೇಮಲತಾ ಎನ್ನುವ ಹೆಸರಿನ ಮೇಲಿರುವ ಸಹಿ ತನ್ನದು ಅಲ್ಲ ಎಂದು ಅಲ್ಲಗಳೆಯುತ್ತಾರೆ. ಕ್ರಮಸಂಖ್ಯೆ 2 ರಲ್ಲಿರುವ ಸಹಿ ತನ್ನ ಅತ್ತೆಯಾದ ವಾದಿ ಚಂದ್ರಾಬಾಯಿದು ಎಂದು ಒಪ್ಪಿಕೊಳ್ಳುತ್ತಾರೆ. ಸದರಿ ಕರಾರುಪತ್ರಕ್ಕೆ ನೋಟರಿ ಪಬ್ಲಿಕ ಎದುರುಗಡೆ ನಾವು ಅವರ ರಜಿಸ್ಟರನಲ್ಲಿ ಸಹಿಗಳನ್ನು ಹಾಕಿದ್ದು ಇದ್ದರೂ ಸಹ ಪ್ರಸ್ತುತ ನನ್ನ ಸಹಿ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಮೇಲೆ ಹೇಳಿರುವ ನಿ.ಪಿ.5 ಮತ್ತು 6 ರಂತೆ ಇರುವ ಪಾಸಪುಸ್ತಕಗಳು ನನ್ನ ಅತ್ತೆಯ ತಮ್ಮ ನನ್ನ ಮೃತ ಪತಿಯ ಸೇವಾ ಸೌಲಭ್ಯಗಳಿಗೆ ಮತ್ತು ಮಾಡಿಸಿದ ವಿಮೆಗೆ ನಾಮಿನಿ ನಾನೇ ಎಂದು ಹೇಳಿ ಸದರಿ ಪಾಸಪುಸ್ತಕಗಳನ್ನು ಮಾಡಿಸಿರುತ್ತಾರೆ ಎಂದು ನನಗೆ ಈಗ ಗೊತ್ತಾಯಿತು. ಸಾಕ್ಷಿದಾರರು ಮುಂದುವರೆದು ವಿಮೆ ಪಾಲಿಸಿಗೆ ನಾನೇ ನಾಮಿನಿ ಎಂದು ನನಗೆ ಮೊದಲೇ ಗೊತ್ತಿತ್ತು ಎಂದು ಉತ್ತರಿಸುತ್ತಾರೆ. ಈ ರೀತಿ ಮೊದಲೇ ಗೊತ್ತಾಗಿರುವ ವಿಷಯಕ್ಕೆ ಮತ್ತೆ ಪಾಸಪುಸ್ತಕಗಳನ್ನು ಮಾಡಿಸುವ ಪ್ರಸಂಗ ಬರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ಅತ್ತೆಯ ತಮ್ಮ ನಾಮಿನಿ ನೀವೆ ಇರುತ್ತಿರಿ ಅಂಚೆ ಇಲಾಖೆಯಲ್ಲಿ ಪಾಸಪುಸ್ತಕಗಳನ್ನು ಮಾಡಿಸಬೇಕಾಗುತ್ತದೆ ಎಂದು ಹೇಳಿರುತ್ತಾರೆ. ನನಗೆ ಪಾಸಪುಸ್ತಕ ನನ್ನ ಹೆಸರಿನಲ್ಲಿ ಮಾತ್ರ ಎಂದು ಹೇಳಿ ನಂತರ ನನ್ನ ಅತ್ತೆಯನ್ನು ಸಹ ಸೇರಿಸಿ ಜಂಟಿ ಖಾತೆ ಮಾಡಿ ನನಗೆ ಮೋಸ ಮಾಡಿರುತ್ತಾರೆ.

ನಾನು ಬಿ.ಎ ಪದವಿಧರೆ. ನಾನು ಬ್ಯಾಂಕನಲ್ಲಿ ಖಾತೆ ತೆಗೆಯುವಾಗ ನನ್ನ ಸಹಿ ಮಾಡಿರುತ್ತೇನೆ. ನನ್ನ ಗಂಡ ತೀರಿಹೋದ ನಂತರ ನನಗೆ ಮಾನಸಿಕವಾಗಿ ನೊಂದಿದ್ದೇನೆ, ಆ ನೋವಿನಲ್ಲಿ ಸಹಿ ಮಾಡಿರುತ್ತೇನೆ

ಎಂದು ಸ್ವತ ಹೇಳುತ್ತಾರೆ. ನನ್ನ ಗಂಡ ತೀರಿಹೋದ ಒಂದು ತಿಂಗಳ ಅವಧಿಯಲ್ಲಿ ಸದರಿ ಪಾಸಪುಸ್ತಕ ಮಾಡಿರುತ್ತಾರೆ. ಈ ರೀತಿ ಜಂಟಿ ಖಾತೆ ಮಾಡಿದ್ದು ನನಗೆ ಅವರು ಮಾಡಿ ತಂದು ತೋರಿಸಿದ ಕೂಡಲೇ ಗೊತ್ತಾಯಿತು. ನಾನು ಜಂಟಿ ಖಾತೆಗೆ ಒಪ್ಪುವುದಿಲ್ಲ ಎಂದು ಬ್ಯಾಂಕಗೆ ತಕರಾರು ನೀಡಿಲ್ಲ ಕಾರಣ ನನಗೆ ಮನೆಯಲ್ಲಿ ಹಿಂಸೆ ನೀಡಿರುತ್ತಾರೆ. ನಮ್ಮ ಕುಟುಂಬದ ಮನೆತನದ ಆಸ್ತಿಗಳ ಕುರಿತು ನಮ್ಮ ಮನೆಯಲ್ಲಿ ಒಪ್ಪಂದಪತ್ರವಾಗಿತ್ತು, ಅದಕ್ಕೆ ತಕ್ಕಂತೆ ಈ ರೀತಿ ಜಂಟಿ ಖಾತೆ ತೆರೆಯಲಾಗಿತ್ತು ಎಂದರೆ ಸರಿಯಲ್ಲ. ಸದರಿ ಒಪ್ಪಂದಪತ್ರದ ಕುರಿತು ಅದು ಆದ ಮೇಲೆ ಗೊತ್ತಾಯಿತು. ಸದರಿ ಒಪ್ಪಂದಪತ್ರದ ಮೇಲಿರುವ ಫೋಟೊವನ್ನು ಸಹ ನಾನು ಕೊಡಲಿಲ್ಲ, ನಮ್ಮ ಮನೆಗೆ ಬಂದು ಒತ್ತಾಯಪೂರ್ವಕವಾಗಿ ಪಡೆದಿರುತ್ತಾರೆ. ಈ ರೀತಿ ಒತ್ತಾಯಪೂರ್ವಕವಾಗಿ ಪಡೆದಿರುತ್ತಾರೆ ಎಂದು ನಾನು ದೂರನ್ನು ನೀಡಿಲ್ಲ ಮತ್ತು ಯಾವುದೇ ಪ್ರಕರಣ ಹೂಡಿಲ್ಲ. ಕಾರಣವೆನೆಂದರೆ ನಾನು ಅವರ ಜೊತೆಗೆ ಮಾತುಕತೆ ಮಾಡಿ ವ್ಯವಹಾರ ಮುಗಿಸಬೇಕೆಂದು ಅಂದುಕೊಂಡಿದ್ದೇನೆ ಅಷ್ಟರಲ್ಲಿ ಸದರಿ ದಾವೆ ಹೂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಈ ರೀತಿ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ, ನನ್ನ ತಂದೆಯವರ ಮಧ್ಯಸ್ಥಿಕೆಯಲ್ಲಿ ಸದರಿ ಒಪ್ಪಂದಪತ್ರ ಮಾಡಿದ್ದು ಅದಕ್ಕೆ ನನ್ನ ತಂದೆಯೂ ಸಹ ಸಹಿ ಹಾಕಿರುತ್ತಾರೆ ಎಂದರೆ ಸರಿಯಲ್ಲ.ಸದರಿ ಪತ್ರದಲ್ಲಿ ಜೆ.ಕೆ.ಚವಾಣ ಎನ್ನುವ ಹೆಸರು ಇದೆ, ಆದರೆ ಸದರಿ ಹೆಸರಿನ ಮೇಲೆ ಮಾಡಿರುವ ಸಹಿ ನನ್ನ ತಂದೆಯದು ಇರುವುದಿಲ್ಲ. ಸದರಿ ಪತ್ರದಲ್ಲಿ ಮಾಡಿರುವ ಮಿಕ್ಕಿದ ಸಹಿಗಳು ಸಹ ನನಗೆ ಗುರುತಿಸಲು ಆಗುವುದಿಲ್ಲ. ಸದರಿ ಒಪ್ಪಂದ ಪತ್ರ ಮಾಡಿಸುವುದಕ್ಕೆ ನೋಟರಿ ಪಬ್ಲಿಕ ಮುಂದೆ ನಾನು ಪ್ರಸ್ತುತವಿರಲಿಲ್ಲ ಮತ್ತು ನಾನು ಅವರ ಸಮಕ್ಷಮ ಸಹಿ ಸಹ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಪತಿ ರಮೇಶ ಹುಬ್ಬಳ್ಳಿಯಲ್ಲಿ ಹೃದಯಾಘಾತದಿಂದ ತೀರಿಕೊಂಡಿರುತ್ತಾರೆ. ಸದರಿ ಸಮಯದಲ್ಲಿ ನಾನು ಮತ್ತು ವಾದಿಯಾದ ನನ್ನ ಅತ್ತೆ ಮನೆಯಲ್ಲಿದ್ದೇವು. ನನ್ನ ಪತಿಯು ತೀರಿಹೋದ ನಂತರ ನಾನು ಎರಡು ತಿಂಗಳವರೆಗೆ ಧಾರವಾಡದಲ್ಲಿ ವಾಸವಿದ್ದೆ. ನಂತರ ನಾನು ಯಾರಿಗೂ ಹೇಳದೆ ಮನೆಬಿಟ್ಟು ಹೋಗಿರುತ್ತೇನೆ ಎಂದರೆ ಸಾಕ್ಷಿದಾರರು ನನಗೆ ಹಿಂಸೆ ನೀಡಿ ಮನೆಯಿಂದ ಓಡಿಸಿದ್ದಾರೆ ಎಂದು ಉತ್ತರಿಸುತ್ತಾರೆ. ನಂತರ ಅಂಚೆ ಕಚೇರಿಯಲ್ಲಿ ನಾಮಿನಿ ಪಟ್ಟಿ ತುಂಬಲು ನನ್ನನು ಅಂಚೆ ಇಲಾಖೆಯವರು ಕರೆದಿದ್ದಕ್ಕೆ ನಾನು ಪುನಃ ಮನೆಗೆ ಹೋದೆ ಆದರೆ ಯಾರು ನನ್ನನು ಮಾತನಾಡಿಸಿರುವುದಿಲ್ಲ. ನನ್ನ ಪತಿ ತೀರಿಹೋದ 20 ದಿವಸದ

ನಂತರ ಈ ಘಟನೆ ಆಗಿರುತ್ತದೆ. ನನ್ನ ಪತಿ ತೀರಿಹೋದ ನಂತರ ಸೇವಾಸೌಲಭ್ಯಗಳ ಸಲುವಾಗಿ ಫಾರ್ಮ ತುಂಬಲು ನನ್ನನು ಕರೆದಿರುತ್ತಾರೆ. ಈ ರೀತಿ ಹೇಳಿಕೆಗಳನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಪತಿ ಎಲ್‌ಐಸಿಯಲ್ಲಿ ನಾಲ್ಕು ವಿಮೆ ಪಾಲಿಸಿಗಳನ್ನು ಮಾಡಿಸಿರುತ್ತಾರೆ. ಸದರಿ ವಿಮೆ ಪಾಲಿಸಿಯ ಹಣ ನನಗೆ ಬಂದಿರುತ್ತದೆ. ಸದರಿ ಪಾಲಿಸಿಗಳು ಹುಬ್ಬಳ್ಳಿಯಲ್ಲಿ ಮಾಡಿಸಿದ್ದು ಇರುತ್ತದೆ. ಈ ರೀತಿ ನನಗೆ ರೂ.6,80,000/- ಹಣ ಬಂದಿರುತ್ತದೆ. ಆ ಸಮಯದಲ್ಲಿ ನನ್ನ ಅತ್ತೆಯಾದ ವಾದಿ ಹಣವನ್ನು ನನಗೆ ಸಹ ಕೊಡಬೇಕು ಎಂದು ತಕರಾರು ಮಾಡಿದ್ದರು. ಈ ರೀತಿ ತಕರಾರು ಮಾಡಿದ್ದರು ಸಹ ಸದರಿ ಪಾಲಿಸಿಗಳನ್ನು ಬೆಳಗಾವಿಗೆ ವರ್ಗಾಯಿಸಿಕೊಂಡು ಸದರಿ ಹಣವನ್ನು ನಾನು ಮಾತ್ರ ಪಡೆದಿದ್ದೇನೆ ಎಂದರೆ ಸರಿಯಲ್ಲ, ನಾನು ವರ್ಗಾಯಿಸಿಕೊಂಡಿಲ್ಲ. ಸದರಿ ವಿಮೆ ಹಣ ನನಗೆ ಮಾತ್ರ ಬಂದಿರುತ್ತದೆ ಎಂದರೆ ನಿಜ.

ನನ್ನ ಪತಿಯ ಮರಣದ ನಂತರ ಕುಟುಂಬದ ಜೀವಂತ ಸದಸ್ಯರ ಪ್ರಮಾಣಪತ್ರ ನೀಡಬೇಕಂದು ಅರ್ಜಿ ಸಲ್ಲಿಸಿದ್ದೇನೆ ಎಂದರೆ ನಿಜ. ಅದರಲ್ಲಿ ನಾನು ಒಬ್ಬಳೆ ವಾರಸುದಾರಳು ಎಂದು ಕೊಟ್ಟಿದ್ದೇನೆ ಎಂದರೆ ಸಾಕ್ಷಿದಾರರು ನಾನು ಮತ್ತು ನನ್ನ ಅತ್ತೆ ಇಬ್ಬರೂ ವಾರಸುದಾರರು ಎಂದು ಹೇಳಿ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಈ ರೀತಿ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಕುಟುಂಬದ ಜೀವಂತ ಸದಸ್ಯರ ಪ್ರಮಾಣಪತ್ರ ನಾನು ಒಬ್ಬಳೇ ಸದಸ್ಯಳು ಎಂದು ನೀಡಿರುತ್ತಾರೆ ಎಂದರೆ ಸರಿಯಲ್ಲ, ಇಬ್ಬರೂ ಸದಸ್ಯರು ಎಂದು ನೀಡಿರುತ್ತಾರೆ. ಈ ರೀತಿ ನಾನು ಒಬ್ಬಳೆ ಕುಟುಂಬ ಸದಸ್ಯಳು ಎಂದು ನೀಡಿರುವ ಪ್ರಮಾಣಪತ್ರ ದುರುಪಯೋಗ ಮಾಡಿಕೊಂಡು ಎಲ್‌ಐಸಿ ಹಣ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಅಂಚೆ ಇಲಾಖೆಯಲ್ಲಿ ಬರುವ ಸೌಲಭ್ಯಗಳು ನನಗೆ ಮಾತ್ರ ಸಲ್ಲಬೇಕು ಎಂದು ಅಂಚೆ ಇಲಾಖೆಯಲ್ಲಿ ಕೂಡಾ ಒತ್ತಾಯ ಮಾಡಿರುತ್ತೇನೆ ಎಂದರೆ ಸರಿಯಲ್ಲ.

***ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ವಾದಿಯ ಪರ ವಕೀಲರ ಮನವಿಯ ಮೇರೆಗೆ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.